# ಪಾಟಿಯಾಲ ಘರಾಣದ ಅನರ್ಘ್ಯ ರತ್ನ



ಹಿಂದೂಸ್ತಾನಿ ಸಂಗೀತದ ಮೂಲಕ ಭಾರತ–ಪಾಕಿಸ್ತಾನ ಬಾಂಧವ್ಯ ಹೆಚ್ಚಿಸಿದ್ದಲ್ಲದೆ ಲಕ್ಷಾಂತರ ಅಭಿಮಾನಿಗಳನ್ನು ಹೊಂದಿದ್ದ ಪಾಟಿಯಾಲ ಘರಾಣದ ರತ್ನ ಉಸ್ತಾದ್ ಬಡೆ ಫತೆ ಅಲಿಖಾನ್ ಇನ್ನು ನೆನಪು ಮಾತ್ರ.

■ ಉಮಾ ವೇಣೂರು

ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ಪಾಟಿಯಾಲ ಘರಾಣದ ಅನರ್ಘ್ಯ ರತ್ನ ಉಸ್ತಾದ್ ಬಡೆ ಫತೆ ಅಲಿಖಾನ್. ಇವರ ಗಾಯನ ಶೈಲಿ ಅತ್ಯಂತ ಆಕರ್ಷಕ. ಅಕಾರ್ ತಾನ್‌ಗಳು ಕಠಿಣ. ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದಲ್ಲಿ ಖಯಾಲ್ ಪ್ರಕಾರದಲ್ಲಿ ಅದ್ಭುತ ಸಾಧನೆ ಮಾಡಿದ ಈ ಮಹಾನ್ ಗಾಯಕ ಭಾರತ ಹಾಗೂ ಪಾಕಿಸ್ತಾನ ಎರಡೂ ದೇಶಗಳ ಸಂಪರ್ಕ ಸೇತುವಾಗಿ ಮೆರೆದವರು. ಲಕ್ಷಾಂತರ ಅಭಿಮಾನಿ ಕೇಳುಗರನ್ನು ಹೊಂದಿದ್ದರು. ಉಸ್ತಾದ್ ಅಮಾನತ್ ಖಾನ್ ಜತೆಗೆ ಹಲವಾರು ಕಛೇರಿಗಳಲ್ಲಿ ಕೇಳುಗರನ್ನು ಮಂತ್ರಮುಗ್ಧಗೊಳಿಸಿದ್ದರು.

ಪಾಟಿಯಾಲ ಘರಾಣದಲ್ಲಿ ಪ್ರಭುತ್ವ ಸಾಧಿಸಿದ್ದ ತಂದೆ ಅಖ್ತರ್ ಹುಸೇನ್ ಖಾನ್ ಅವರ ಬಳಿ ಸಂಗೀತ ಅಭ್ಯಾಸ ಮಾಡಿ ಸತತ ತಾಲೀಮು, ಪರಿಶ್ರಮ ವಹಿಸಿದ್ದ ಬಡೆ ಫತೆ ಅಲಿಖಾನ್ ಈ ಘರಾಣೆ ಶೈಲಿಯನ್ನು ಅತ್ಯಂತ ಜನಪ್ರಿಯಗೊಳಿಸಿದವರು ಎಂಬ ಖ್ಯಾತಿಗೆ ಪಾತ್ರರಾದವರು.

ಉಸ್ತಾದ್ ಬಡೆ ಫತೆ ಅಲಿ ಖಾನ್ (1935–2017, ಜನವರಿ 4) ಶಾಸ್ತ್ರೀಯ ಸಂಗೀತದಲ್ಲಿ ಮೂಡಿಸಿದ್ದ ಸಂಚಲನ ಎರಡೂ ದೇಶಗಳ ಬಾಂಧವ್ಯ ವೃದ್ಧಿಗೂ ಸಹಕಾರಿಯಾಗಿತ್ತು. ಸಂಗೀತ ಸೇತುವೆ ಮೂಲಕ ಉಭಯ ದೇಶಗಳ ಸಾಂಸ್ಕೃತಿಕ ರಾಯಭಾರಿಗಳಂತೆಯೂ ಮೆರೆದ ಖಾನ್, ಉಸ್ತಾದ್ ಅಮಾನತ್ ಖಾನ್ ಜತೆಗೆ ನಡೆಸಿಕೊಟ್ಟ ಜುಗಲ್‌ಬಂದಿ ಕಛೇರಿಗಳು ಎಂದೆಂದಿಗೂ ಸಂಗೀತ ಲೋಕದಲ್ಲಿ ಮಾರ್ದನಿಸುವಂಥದ್ದು.

ಅದು ಲಾಹೋರ್‌ನಲ್ಲಿ 1945ರಲ್ಲಿ ನಡೆದ ಕಾರ್ಯಕ್ರಮ. ಅಲ್ಲಿ ಅಮಾನತ್ ಅಲಿ ಖಾನ್ ಮತ್ತು ಫತೆ ಅಲಿ ಖಾನ್ ಅವರ ಜುಗಲ್‌ಬಂದಿ. ಈ ಕಛೇರಿಯೊಂದೇ ಫತೆ ಅಲಿ ಖಾನ್ ಅವರಿಗೆ ಹಲವಾರು ಅಭಿಮಾನಿಗಳನ್ನು ಹುಟ್ಟುಹಾಕಿತ್ತು. ಫತೆ ಅಲಿ ಖಾನ್ ಸಂಗೀತ ಜೀವನದಲ್ಲಿ ಮತ್ತೊಂದು ಮಹತ್ವದ ತಿರುವು ಉಂಟಾಗಿದ್ದು 1949ರಲ್ಲಿ ಕೋಲ್ಕತ್ತಾದಲ್ಲಿ ನಡೆದ 'ಅಲ್‌ಬೆಂಗಾಲ್ ಮ್ಯೂಸಿಕ್ ಕಾನ್ಫರೆನ್ಸ್'ನಲ್ಲಿ. ಆಗ ಅಮಾನತ್ ಅಲಿ ಖಾನ್‌ಗೆ 17 ವರ್ಷವಾದರೆ ಫತೆ ಅಲಿಖಾನ್‌ಗೆ ಕೇವಲ 14 ವರ್ಷ. ಈ ಕಛೇರಿ ಫತೆ ಅಲಿಖಾನ್ ಅವರನ್ನು ಸಂಗೀತ ಕ್ಷೇತ್ರದಲ್ಲಿ ಗಟ್ಟಿಯಾಗಿ ನೆಲೆ ನಿಲ್ಲುವಂತೆ ಮಾಡಿದ್ದಲ್ಲದೆ ಮತ್ತೆಂದೂ ಹಿಂದಿರುಗಿ ನೋಡದಂತೆ ಮಾಡಿತ್ತು. 'ಕೋಲ್ಕತ್ತಾ ಕಛೇರಿ ನನ್ನ ಸಂಗೀತ ಜೀವನದ ಮಹತ್ವದ ಮೈಲಿಗಲ್ಲು' ಎಂದು ಸ್ವತಃ ಫತೇ ಅಲಿ ಖಾನ್ ಅವರೇ ತನ್ನ 60ನೇ ವಯಸ್ಸಿನಲ್ಲಿ ಪಾಕಿಸ್ತಾನದಲ್ಲಿ ನಡೆದ ಸಂಗೀತ ಸಮ್ಮೇಳನವೊಂದರಲ್ಲಿ ಹೇಳಿಕೊಂಡಿದ್ದರು. ಇವರಿಬ್ಬರೂ ಹದಿ ವಯಸ್ಸಿನಲ್ಲೇ 'ಸೆಲೆಬ್ರಿಟಿ'ಗಳಾದದ್ದು ಆ ಕಾಲದ ಸಂಗೀತ ಲೋಕದಲ್ಲಿ ವಿರಳಾತಿ ವಿರಳ ಸಾಧನೆ ಎನ್ನಬಹುದು. ಅಲ್ಲದೆ 1969ರಲ್ಲೇ ಪಾಕಿಸ್ತಾನದ ಅಧ್ಯಕ್ಷ ಫತೆ ಅಲಿ ಖಾನ್ ಅವರಿಗೆ 'ಪ್ರೈಡ್ ಆಫ್ ಪರ್ಫಾಮೆನ್ಸ್ ಮೆಡಲ್' ನೀಡಿದ್ದು ಕೂಡ ಬಹುದೊಡ್ಡ ಸಾಧನೆಯೇ ಆಗಿದೆ. ಆಗಲೇ ಫತೆ ಅಲಿ ಖಾನ್ ಅವರ ಹೆಸರಿನ ಜತೆಗೆ 'ಬಡೆ' ಎಂಬ ವಿಶೇಷಣವೂ ಸೇರಿಕೊಂಡಿತ್ತು. ಆಗ ಅವರಿಗೆ 34 ವರ್ಷ. ಅಲ್ಲಿಂದ ಮತ್ತೆ ಫತೆ ಅಲಿ ಖಾನ್ ಅವರು ಬಡೆ ಫತೆ ಅಲಿಖಾನ್ ಆದರು.

ಸಂಗೀತ ಪಯಣ ಮುಂದುವರಿಸುತ್ತಾ ಭಾರತ ಸ್ವಾತಂತ್ರ್ಯವಾದ ಬಳಿಕವೂ ಎರಡೂ ದೇಶಗಳಲ್ಲಿ ಲೆಕ್ಕವಿಲ್ಲದಷ್ಟು ಕಛೇರಿ ನೀಡಿದರು. 1974ರಲ್ಲಿ ಡಿಪ್ರೆಷನ್‌ಗೆ ಒಳಗಾದ ಫತೆ ಅಲಿ ಖಾನ್‌ಗೆ ಸುಮಾರು ಒಂದೂವರೆ ವರ್ಷ ಹಾಡಲಾಗಲಿಲ್ಲ. ಅದಾಗಿ ಇವರು ಪಾಕಿಸ್ತಾನ ರೇಡಿಯೊ ಸ್ಟೇಷನ್‌ನಲ್ಲಿ ಸೂಪರ್‌ವೈಸರ್ ಆಗಿ ಸೇರಿದರು. ಸ್ವಲ್ಪ ಸಮಯ ಹಾಡುವ ಗೋಜಿಗೇ ಹೋಗದಿದ್ದ ಫತೆ ಅಲಿ ಖಾನ್ ಮತ್ತೆ ತಮ್ಮ ಗಾನ ಆರಂಭಿಸಿದರು.



ಸಂಗೀತ ಪಯಣದ ಎರಡನೆ ಇನಿಂಗ್ಸ್ ಆರಂಭಿಸಿದ ಈ ಗಾಯಕ ಮುಂದೆ ಖಯಾಲ್ ಶೈಲಿ ಮಾತ್ರವಲ್ಲದೆ ಧ್ರುಪದ್, ಠುಮ್ರಿ, ದಾದ್ರ ಮತ್ತು ಗಜಲ್‌ಗಳನ್ನೂ ಹಾಡಿ ರಂಜಿಸಲಾರಂಭಿಸಿದರು, ಯೂರೋಪ್, ಅಮೆರಿಕ, ಮಿಡಲ್ ಈಸ್ಟ್, ದಕ್ಷಿಣ ಏಷ್ಯಾ ದೇಶಗಳಲ್ಲಿ ನಿರಂತರ ಸಂಗೀತ ಯಾತ್ರೆ ನಡೆಸಿದರು. ಅನೇಕ ಸೀಡಿಗಳನ್ನು ಹೊರತಂದರು, ಅನೇಕ ಶಿಷ್ಯಂದಿರನ್ನು ತಯಾರು ಮಾಡಿದರು. ಸುಮಾರು ಏಳೂವರೆ ದಶಕಗಳ ಕಾಲ ಹಾಡಿ ಹಿಂದೂಸ್ತಾನಿ ಸಂಗೀತ ಜಗತ್ತಿನಲ್ಲಿ ಹಲವು ಹೆಜ್ಜೆ ಗುರುತುಗಳನ್ನು ಉಳಿಸಿದ ಫತೆ ಅಲಿ ಖಾನ್ ಅಪಾರ ಶಿಷ್ಯವೃಂದ, ಅಭಿಮಾನಿಗಳನ್ನು ಬಿಟ್ಟು ಬಾರದ ಲೋಕಕ್ಕೆ ತೆರಳಿದ್ದು ಮಾತ್ರ ಸಂಗೀತ ಕ್ಷೇತ್ರಕ್ಕಾದ ಬಹುದೊಡ್ಡ ನಷ್ಟ. ■